ಶ್ರೀ ಸುಧೇಂದ್ರರಾವ್ ಕಸ್ಬೆ.— ಸ್ವಾಮಿ, ಕಲಮುಲ ಕ್ಷೇತ್ರದಲ್ಲಿ ಹಳ್ಳಿಪ್ರಡ ಗ್ರಾಮ ಇಲ್ಲ ಎಂದು ತಪ್ಪು ವರದಿಯಾಗಿದೆ. ಆದುದರಿಂದ ಈ ರೀತಿ ತಪ್ಪು ವರದಿ ಕೊಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಕೇಳುತ್ತೇನೆ ?

ಶ್ರೀ ಕೆ. ಪ್ರಭಾಕರ್.— ಈಗ ತಾವು ಏನು ಹೇಳಿದ್ದೀರಿ, ಅದರ ಬಗ್ಗೆ ಸಂಶಯಾತ್ಮಕ ವಿಚಾರ ಇದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಸುಧೇಂದ್ರರಾವ್ ಕಸ್ಬೆ.— ಸ್ವಾಮಿ, ಕಲಮುಲ ಕ್ಷೇತ್ರದಲ್ಲಿ ನ್ಯಾಷನಲ್‌ರೂರಲ್ ವಾಟರ್ ಡೆವಲಪ್‌ಮೆಂಟ್ ಪ್ರಕಾರ ಲೋಕಲ್ ಕಾಂಟ್ರಿಬ್ಯೂಷನ್ ಕಟ್ಟಿದ್ದಾರೆ. ಆದುದ್ದರಿಂದ ಈ ಕ್ಷೇತ್ರದ ಕೆಲಸವನ್ನು ಈ ಬಡ್ಜೆಟ್ ಸೆಷನ್‌ನಲ್ಲಿಯೇ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಪ್ರಭಾಕರ್.— ಅದರ ಬಗ್ಗೆ ಯೋಚನೆ ಮಾಡುತ್ತೇನೆ.

State Fund and P.C. Roads in Belur Taluk

99 SRI B.H. LAKSHMANAIAH (Belur) — Will the Minister for Public Works be pleased to state.—

(a) the length of State Fund and R.C. roads in Belur taluk;

(b) out of them, the number of miles of roads which have deen asphalted;

(c) the length of roads in other taluks of Hassan District and the number of miles of roads asphalted in each taluk ?

SRI S. BANGARAPPA (Minister for Public Works).—

(a)—

(1) Length of State Fund Roads ... 346.K.M.

(2) Length of R.C. Roads ... 114 K.M.

(b) Out of the State Fund Roads, a length of 135 K.M. has been asphalted. R C. Roads have not been asphalted.

(c) —

Name of Taluk	Total length of roads in K.M.	Length of asphalted roads in K.M.
H ssan	522	136
Arasikere	676	173
Channarayapatna	553	193
Holenarasipur	476	77
Arakalagud	424	99
Sakaleshpur	603	144
Alur	329	51
Total	3,583	873

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಸ್ವಾಮಿ, ತಾವು ಬೇಲೂರು ತಾಲ್ಲೂಕಿನ ಸ್ಟೇಟ್ ಫಂಡ್ ರಸ್ತೆಗಳ ಉದ್ದ ೩೪೬ ಕಿಲೋಮೀಟರ್ ಎಂದು ಹೇಳಿದ್ದೀರಿ. ಹಾಸನ ಜಿಲ್ಲೆಯ ಮತ್ತಿತರ ತಾಲ್ಲೂಕುಗಳ ಸ್ಟೇಟ್ ಫಂಡ್ ರಸ್ತೆಗಳ ಉದ್ದವನ್ನು ಕೊಟ್ಟಿದ್ದೀರಿ. ಈ ಸ್ಟೇಟ್ ಫಂಡ್ ರಸ್ತೆಗಳನ್ನು ಕನ್‌ವರ್ಟ್ ಮಾಡುವಾಗ ಇದರ ಬಗ್ಗೆ ಸರ್ಕಾರ ಏನಾದರೂ ನೀತಿ ನಿಯಮ ಇಟ್ಟುಕೊಂಡಿದೆಯೇ ? ಈಗ ಬೇಲೂರು ತಾಲ್ಲೂಕಿನಲ್ಲಿ ೩೪೬ ಕಿಲೋಮೀಟರ್ ಉದ್ದ ಇದೆ. ಬಾಕಿ ತಾಲ್ಲೂಕುಗಳಲ್ಲಿ ೫೦೦, ೬೦೦ ಕಿಲೋಮೀಟರ್ ಉದ್ದ ಇದೆ. ಬೇಲೂರು ತಾಲ್ಲೂಕಿನಲ್ಲಿ ಇಷ್ಟು ಕಡಿಮೆ ಆಗಲಿಕ್ಕೆ ಕಾರಣ ಏನು ?

† ಶ್ರೀ ಎಸ್. ಬಂಗಾರಪ್ಪ.—ಈಗ ಮಾನ್ಯ ಸದಸ್ಯರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಒಂದನೆಯದು ಸ್ಟೇಟ್ ಫಂಡ್ ರಸ್ತೆ ತೆಗೆದುಕೊಳ್ಳುವುದಕ್ಕೆ ನೀತಿ ನಿಯಮ ಇದೆಯೇ ಎಂದು ಕೇಳಿದ್ದಾರೆ, ಆ ರೀತಿ ತೆಗೆದುಕೊಳ್ಳುವುದು ನೀತಿ ನಿಯಮಗಳು ಇವೆ. ಎರಡನೆಯದಾಗಿ ಬೇಲೂರು ತಾಲ್ಲೂಕಿನಲ್ಲಿ ೩೪೬ ಕಿಲೋಮೀಟರ್ ಮಾತ್ರ ಇದ್ದು ಬೇರೆ ತಾಲ್ಲೂಕುಗಳಲ್ಲಿ ಜಾಸ್ತಿ ಇದೆ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ದಯಮಾಡಿ ಲಿಸ್ಟ್ ನೋಡಿದರೆ ಬೇರೆತಾಲ್ಲೂಕುಗಳಲ್ಲಿಯೂ ಕೂಡ ಕಡಿಮೆ ಇದೆ ಎನ್ನುವುದು ಅರ್ಥವಾಗುತ್ತದೆ. ಜೊತೆಗೆ ಉದ್ದ, ಅಗಲ, ಅದರ ವಿಸ್ತೀರ್ಣದ ಮೇಲೆ ರಸ್ತೆಗಳು ಇರುತ್ತವೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಆಲೂರು ತಾಲ್ಲೂಕು ಬಹಳ ಚಿಕ್ಕ ತಾಲ್ಲೂಕು, ಅದೇ ಬೇಲೂರು ಬಹಳ ದೊಡ್ಡ ತಾಲ್ಲೂಕು. ಆಲೂರು ತಾಲ್ಲೂಕಿನಲ್ಲಿ ೩೨೯ ಕಿಲೋಮೀಟರ್ ಇದೆ. ಅದೇ ಬೇಲೂರು ತಾಲ್ಲೂಕಿನಲ್ಲಿ ೩೪೬ ಕಿಲೋಮೀಟರ್ ಇದೆ. ಈಗ ಕಳೆದ ೫ ವರ್ಷಗಳಿಂದಲೂ ಸ್ಟೇಟ್ ಫಂಡ್ ರಸ್ತೆಯಾಗಿ ಎಷ್ಟು ಕಿಲೋಮೀಟರ್ ಕನ್‌ವರ್ಟ್ ಮಾಡಿದ್ದೀರಾ ?

ಶ್ರೀ ಎಸ್ ಬಂಗಾರಪ್ಪ. ಈಗ ಒಂದು ತಾಲ್ಲೂಕು ಚಿಕ್ಕದು, ಒಂದು ತಾಲ್ಲೂಕು ದೊಡ್ಡದು ಎಂದು ನಿಷ್ಕರ್ಷೆ ಮಾಡಬೇಕಾದರೆ ಅಲ್ಲಿರತಕ್ಕ ಅನೇಕ ವಿಷಯಗಳನ್ನು ಅಧ್ಯಯನ ಮಾಡಿ ತೆಗೆದುಕೊಳ್ಳಬೇಕಾಗುತ್ತದೆ. ಅರಣ್ಯ ಪ್ರದೇಶ ಇತ್ಯಾದಿಗಳ ಮೇಲೂ ಹೋಗುತ್ತದೆ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ.—ಸ್ವಾಮಿ, ಬೇಲೂರು ತಾಲ್ಲೂಕಿನಲ್ಲಿ ಕಳೆದ ೫ ವರ್ಷಗಳಿಂದಲೂ ಎಷ್ಟು ಮೈಲಿ ಸ್ಟೇಟ್ ಫಂಡ್ ರಸ್ತೆಗಳನ್ನು ತೆಗೆದುಕೊಂಡಿದ್ದಿರಾ ?

ಶ್ರೀ ಎಸ್. ಬಂಗಾರಪ್ಪ.—ಅದರ ಬಗ್ಗೆ ನನ್ನ ಹತ್ತಿರ ವಿವರ ಇಲ್ಲ. ಮಾನ್ಯ ಸದಸ್ಯರಿಗೆ ಅದರ ಬಗ್ಗೆ ವಿವರ ಬೇಕಾದರೆ ನಾನು ಕೊಡುತ್ತೇನೆ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ.—ಸ್ವಾಮಿ, ಸ್ಟೇಟ್ ಫಂಡ್‌ರಸ್ತೆಗಳ ಪೈಕಿ ೧೩೫ ಕಿಲೋಮೀಟರ್ ಉದ್ದದ ರಸ್ತೆಗಳಿಗೆ ಟಾರ್ ಹಾಕಲಾಗಿದೆ ಎಂದು ಹೇಳಿದ್ದೀರಿ. ಈಗ ಹಳೇಬೀಡು ಪ್ರಸಿದ್ಧ ಕಲಾ ಕೇಂದ್ರ ಜಗತ್ತಿನ ಎಲ್ಲಾ ಕಡೆಗಳಿಂದಲೂ ಪ್ರವಾಸಿಗಳು ಅಲ್ಲಿಗೆ ಬರುತ್ತಾರೆ ಹಾಸನದಿಂದ ಹಳೇಬೀಡಿಗೆ ೧೯ ಮೈಲಿ ರಸ್ತೆ ಇದೆ. ಇವೊತ್ತು ಹಾಸನ ತಾಲೂಕಿಗೆ ಪೂರ್ತಿ ಟಾರ್ ಹಾಕಿ, ಹಳೇಬೀಡಿಗೆ ಸೇರುವ ೭-೮ ಮೈಲಿ ರಸ್ತೆ ಕೈಬಿಟ್ಟಿದೆ. ಆ ರಸ್ತೆಯಲ್ಲಿ ತಿರುಗಾಡುವುದಕ್ಕೆ ಸಾಧ್ಯವಿಲ್ಲ, ಆದುದರಿಂದ, ಆದಷ್ಟು ಬೇಗ ಆ ರಸ್ತೆಗೆ ಟಾರ್ ಹಾಕಲಿಕ್ಕೆ ಆದೇಶ ನೀಡುತ್ತಿರಾ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಹಳೆಬೀಡು ಬಹಳ ಪ್ರಾಮುಖ್ಯವಾದ ಸ್ಥಳ ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿದ್ದಾರೆ, ಜೊತೆಗೆ ಹಾಸನ ತಾಲ್ಲೂಕು ಟಾರ್ ಕೆಲಸ ಆಗಿದೆ. ಬೇಲೂರಿನಲ್ಲಿ ಆಗಿಲ್ಲ ಎಂದು ಹೇಳಿದ್ದಾರೆ ಅದನ್ನು ನಾನು ಕೂಡಲೇ ಪರಿಶೀಲಿಸಿ ಆದಷ್ಟು ಶೀಘ್ರವಾಗಿ ಮಾಡಿಸಿಕೊಡುವ ಪ್ರಯತ್ನ ಮಾಡುತ್ತೇನೆ.